CW-10
PW-08

**1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಯಚೂರು.**

ಸ್ಪೇಷಲ್ .ಕೇಸ್(ಎಸ್.ಸಿ.ಎಸ್.ಟಿ.) ಸಂಖ್ಯೆ 04/2022

ದಿ. 12-01-2026

(ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು )

ಚಾಸಾ-10
ಫ್ರಾಸಾ-08

| | |
|---|---|
| ಸಾಕ್ಷಿದಾರರ ಹೆಸರು | ಶರಣಯ್ಯ |
| ತಂದೆಯ ಹೆಸರು | ಪವಾಡೆಯ್ಯ ಸ್ವಾಮಿ |
| ವಯಸ್ಸು | 38 ವರ್ಷ |
| ಉದ್ಯೋಗ | ಬಿಲ್ ಕಲೆಕ್ಟರ್ |
| ವಾಸಸ್ಥಳ | ಕಣದಿನ್ನಿ |

**ಮುಖ್ಯ ವಿಚಾರಣೆಃ ಸಾರ್ವಜನಿಕ ಅಭಿಯೋಜಕರಿಂದಃ-**

1. ನನಗೆ ಚಾಸಾ-1 ಯಾರು ಎಂಬುದು ಗೊತ್ತಿಲ್ಲ.

2. ನನಗೆ ಚಾಸಾ-9 ಗೊತ್ತು.

3. ಈಗ ಸುಮಾರು 3-4 ವರ್ಷಗಳ ಹಿಂದೆ ಒಂದು ದಿನ ಪೊಲೀಸರು ಬಂದು, ಒಂದು ದಸ್ತಾವೇಜಿನ ಮೆಲೆ ನನ್ನ ಸಹಿಯನ್ನು ಪಡೆದಿರುತ್ತಾರೆ.

4. ಸದರಿ ದಸ್ತಾವೇಜನ್ನು ಈಗ ನೋಡಿ ಗುರುತಿಸುತ್ತಿದ್ದು, ಅದನ್ನು ಈಗಾಗಲೇ ನಿಪಿ-2 ಎಂದು ಗುರುತಿಸಲಾಗಿದ್ದು, ಅದರ ಮೇಲಿರುವ ನನ್ನ ಸಹಿಯನ್ನು ನಿಪಿ-2(ಡಿ) ಎಂದು ಗುರುತಿಸಲಾಯಿತು.

CW-10
PW-08

5. ನಿಪಿ-2 ರ ಮೇಲೆ ಯಾವ ಕಾರಣಕ್ಕೆ ನನ್ನ ಸಹಿಯನ್ನು ಪಡೆದಿರುತ್ತಾರೆಂದು ನನಗೆ ಮಾಹಿತಿ ಇರುವುದಿಲ್ಲ.

6. ನಿಪಿ-2 ರಲ್ಲಿ ಏನು ಬರೆದಿದೆ ಎಂಬುದು ಸಹ ನನಗೆ ಮಾಹಿತಿ ಇರುವುದಿಲ್ಲ.

7. ಪೊಲೀಸರು ನನ್ನ ಸಮಕ್ಷಮದಲ್ಲಿ ಯಾವುದೇ ಸ್ಥಳ ಪಂಚನಾಮೆಯನ್ನು ಮಾಡಿರುವುದಿಲ್ಲ ಮತ್ತು ಯಾವುದೇ ವಸ್ತುವನ್ನು ಅಮಾನತ್ತು ಪಡಿಸಿಕೊಂಡಿರುವುದಿಲ್ಲ.

8. ಅದೇ ಸಮಯದಲ್ಲಿ ಪೊಲೀಸರು 3 ವರ್ಣ ರಂಜಿತ ಛಾಯಾ ಚಿತ್ರಗಳನ್ನು ಅವುಗಳನ್ನು ಈಗಾಗಲೇ ಕ್ರಮವಾಗಿ ನಿಪಿ-3 ರಿಂದ 5 ಎಂದು ಗುರುತಿಸಿದ್ದು ಇರುತ್ತದೆ.

9. ಸದರಿ ನಿಪಿ-3 ರಿಂದ 5 ಗಳನ್ನು ಪೊಲೀಸರು ಯಾವ ಕಾರಣಕ್ಕೆ ತೆಗೆಸಿರುತ್ತಾರೆಂದು ನನಗೆ ಮಾಹಿತಿ ಇರುವುದಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ವಿಶೇಷ ಅಭಿಯೋಜಕರು ಕೋರಿದ್ದಾರೆ. ಅದರಂತೆ ಸಾಕ್ಷಿಯನ್ನು ಪ್ರತಿಕೂಲ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ವಿಶೇಷ ಅಭಿಯೋಜಕರಿಗೆ ಅನುಮತಿ ನೀಡಲಾಗಿದೆ.)**

**ಪಾಟೀ ಸವಾಲುಃ ಸಾರ್ವಜನಿಕ ಅಭಿಯೋಜಕರಿಂದ**

10. ಈಗ ನನಗೆ ಓದಿ ಹೇಳಿದ ನಿಪಿ-7 ನಿಪಿ-2 ರಂತೆ ದಿಃ 08-12-2021 ರಂದು ಬೆಳಿಗ್ಗೆ 08-30 ರಿಂದ 10 ಗಂಟೆಯವರೆಗೆ ಚಾಸಾ-1 ಇವಳ ತೋರಿಕೆಯ ಮೇರೆಗೆ ಘಟನಾ ಸ್ಥಳಕ್ಕೆ ಭೇಟಿ ನೀಡಿ ಒಂದು ಸ್ಥಳ ಪಂಚನಾಮೆಯನ್ನು ಮಾಡಿ

CW-10
PW-08

ಅದರ ಅಡಿಯಲ್ಲಿ ಒಂದು ಹಸಿರು ನೀಲಿ ಬಣ್ಣದ ಹರಿದ ಚೆಕ್ಸ್ ಶರ್ಟನ್ನು ಅಮಾನತ್ತು ಪಡಿಸಿಕೂಂಡು ನಂತರ ಪಂಚನಾಮೆಯ ಮೇಲೆ ನನ್ನ ಸಹಿಯನ್ನು ಪಡೆದಿರುತ್ತಾರೆ ಎಂದು ಸೂಚಿಸುವುದು ಸರಿಯಲ್ಲ.

11. ಅದೇ ಸಮಯದಲ್ಲಿ ನಿಪಿ-2 ಕ್ಕೆ ಸಂಬಂಧಿಸಿದಂತೆಯೇ ಪೊಲೀಸರು ನಿಪಿ-3 ರಿಂದ 5 3 ವರ್ಣ ರಂಜಿತ ಛಾಯಾ ಚಿತ್ರಗಳನ್ನು ತೆಗೆಸಿರುತ್ತಾರೆಂದು ಸೂಚಿಸುವುದು ಸರಿಯಲ್ಲ.

12. ಈಗ ನಾನು ಆರೋಪಿತನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದು ಸೂಚಿಸುವುದು ಸರಿಯಲ್ಲ.

<u>**ಪಾಟೀ ಸವಾಲು ಶ್ರೀ ಜೆ.ಸಿ.ಪಿ. ವಕೀಲರಿಂದ ಆರೋಪಿ ಪರವಾಗಿಃ**</u>

ಏನೂ ಇಲ್ಲ ಎಂದು ತಿಳಿಸಿರುತ್ತಾರೆ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ.

(ಜಿ.ಡಿ.ಮಹಾವರ್ಕರ್)
1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ರಾಯಚೂರು.